217

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 451
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 14/08/2025
4. ಉತ್ತರಿಸಲಿರುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1. (ಅ) | ರಾಜ್ಯ ಸರ್ಕಾರ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ಇದುವರೆವಿಗೆ ಯಾರು ಯಾರನ್ನು ನೇಮಿಸಿದೆ: (ಅಧ್ಯಕ್ಷರ ಹೆಸರು, ನೇಮಿಸಿದ ದಿನಾಂಕ, ಒಟ್ಟು ಅವಧಿ ಸೇರಿದಂತೆ ಸಂಪೂರ್ಣ ಮಾಹಿತಿ ನೀಡುವುದು) | **1.ಶ್ರೀ ಹಾರನಹಳ್ಳಿ ರಾಮಸ್ವಾಮಿ**<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 19 ಎಎಂಸಿ 200, ದಿನಾಂಕ: 17.04.2000 ರಲ್ಲಿ ನೇಮಿಸಿದೆ.<br>ಕಾರ್ಯನಿರ್ವಹಿಸಿದ ಅವಧಿ: 2000ನೇ ಇಸವಿಯಿಂದ 2001 ರವರೆಗೆ.<br>**2. ಶ್ರೀ ಟಿ.ಎಂ. ವಿಜಯಭಾಸ್ಕರ್,**<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಆಸು) 05 ಅಸಪ 2020, ದಿನಾಂಕ: 7.1.2021 ರಲ್ಲಿ ನೇಮಿಸಿದೆ.<br>ಕಾರ್ಯನಿರ್ವಹಿಸಿದ ಅವಧಿ: ದಿನಾಂಕ: 11.1.2021 ರಿಂದ 30.11.2023.<br>**3. ಶ್ರೀ ಆರ್.ವಿ ದೇಶಪಾಂಡೆ**<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 151 ಶಿಸನೇ 2023, ದಿನಾಂಕ: 29.12.2023.<br>ಕಾರ್ಯ ನಿರ್ವಹಿಸಿದ ಅವಧಿ: ಜನವರಿ 2024 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| (ಆ) | ಕರ್ನಾಟಕ ಆಡಳಿತ ಸುಧಾರಣಾ ಆಯೋಗ 1 ಮತ್ತು 2 ರ ಎಷ್ಟು ವರದಿಗಳು ಸರ್ಕಾರಕ್ಕೆ ಇದುವರೆವಿಗೂ ಸ್ವೀಕೃತವಾಗಿದೆ; (ವರದಿ ಸಲ್ಲಿಸಿದ ಆಯೋಗದ ಅಧ್ಯಕ್ಷರು, ವರದಿ ಸ್ವೀಕರಿಸಿದವರು ಮತ್ತು ವರದಿ ಸಲ್ಲಿಸಿದ ದಿನಾಂಕ, ಸಲ್ಲಿಕೆಯಾದ ವರದಿವಾರು ಮಾಹಿತಿ ನೀಡುವುದು) | ಮೊದಲನೇ ಆಯೋಗವು ಒಂದು ವರದಿಯನ್ನು ಡಿಸೆಂಬರ್ 2001ರಲ್ಲಿ ಹಾಗೂ ಎರಡನೆಯ ಆಯೋಗವು 8 ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.<br>ಮೊದಲನೇ ಆಯೋಗದ ಅಧ್ಯಕ್ಷರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ ರವರು ಮೊದಲನೇ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ. ಕೃಷ್ಣ ರವರಿಗೆ 2001ನೇ ಇಸವಿಯಲ್ಲಿ ಸಲ್ಲಿಸಲಾಗಿದೆ.<br>ಎರಡನೇ ಆಯೋಗದ ಅಧ್ಯಕ್ಷರಾದ ಶ್ರೀ ಟಿ.ಎಂ. ವಿಜಯ್ ಭಾಸ್ಕರ್, ನಿವೃತ್ತ ಐ.ಎ.ಎಸ್ ಹಾಗೂ ಹಿಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರು ಏಳು ವರದಿಗಳನ್ನು ಸಲ್ಲಿಸಿದ್ದು, ಮೊದಲನೇ ವರದಿಯನ್ನು ದಿನಾಂಕ: 3.7.2021ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಯಡಿಯೂರಪ್ಪ ರವರಿಗೆ ಸಲ್ಲಿಸಲಾಗಿದೆ.<br>ತರುವಾಯ ಎರಡನೇ ಮತ್ತು ಮೂರನೇ ವರದಿಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿ ರವರಿಗೆ ದಿನಾಂಕ: 18.02.2022 ರಲ್ಲಿ ಸಲ್ಲಿಸಲಾಗಿದೆ. |

| | | |
|---|---|---|
| | | ನಂತರ ನಾಲ್ಕನೇ ಮತ್ತು ಐದನೇ ವರದಿಗಳನ್ನು ದಿನಾಂಕ:3.2.2023 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿರವರಿಗೆ ಸಲ್ಲಿಸಿದೆ.<br><br>ಆರನೇ ವರದಿಯನ್ನು ದಿನಾಂಕ: 25.11.2023 ರಂದು ಹಾಗೂ ಏಳನೇ ವರದಿಯನ್ನು ದಿನಾಂಕ: 2.2.2024 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಸಿದ್ದರಾಮಯ್ಯ ರವರಿಗೆ ಸಲ್ಲಿಸಿದೆ.<br><br>ಎರಡನೇ ಆಯೋಗದ ಅಧ್ಯಕ್ಷರಾದ ಶ್ರೀ ಆರ್.ವಿ ದೇಶಪಾಂಡೆರವರು ದಿನಾಂಕ: 22.05.2025ರಂದು ಎಂಟನೇ ವರದಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಸಿದ್ದರಾಮಯ್ಯ ರವರಿಗೆ ಸಲ್ಲಿಸಿರುತ್ತಾರೆ. |
| (ಇ) | ಸರ್ಕಾರಕ್ಕೆ ಸಲ್ಲಿಕೆಯಾದ ಆಡಳಿತ ಸುಧಾರಣಾ ಆಯೋಗ-1 ಮತ್ತು 2 ರ 'ವರದಿ' ಗಳಲ್ಲಿ ಇಲಾಖಾವಾರು ಮಾಡಲಾದ ಶಿಫಾರಸ್ಸುಗಳ ಒಟ್ಟು ಸಂಖ್ಯೆ ಎಷ್ಟು? ಈ ಪೈಕಿ ಅನುಷ್ಠಾನಗೊಂಡ, ಅನುಷ್ಠಾನದ ಹಂತದಲ್ಲಿರುವ ಹಾಗೂ ಕಾರ್ಯಗತಗೊಳಿಸಲು ಸಾಧ್ಯವಿಲ್ಲದ ಶಿಫಾರಸ್ಸುಗಳ ಒಟ್ಟು ಸಂಖ್ಯೆ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರಕ್ಕೆ ಸಲ್ಲಿಕೆಯಾದ ಆಡಳಿತ ಸುಧಾರಣಾ ಆಯೋಗ-1 ರ ಮೊದಲನೇ ವರದಿಯಲ್ಲಿ 481 ಅಂತಿಮ ಹಾಗೂ 246 ಮಧ್ಯಂತರ ಶಿಫಾರಸ್ಸುಗಳನ್ನು ಮಾಡಲಾಗಿದ್ದು, ಇವುಗಳ ಪೈಕಿ 462 ಶಿಫಾರಸ್ಸುಗಳು ಅನುಷ್ಠಾನಗೊಂಡಿದ್ದು, 216 ಶಿಫಾರಸ್ಸುಗಳು ಅನುಷ್ಠಾನದ ಹಂತದಲ್ಲಿರುತ್ತವೆ ಹಾಗೂ 49 ಶಿಫಾರಸ್ಸುಗಳನ್ನು ಅಂಗೀಕರಿಸಿರುವುದಿಲ್ಲ.<br><br>ಆಡಳಿತ ಸುಧಾರಣಾ ಆಯೋಗ - 2 ರ ಒಟ್ಟು ಏಳು ವರದಿಗಳಲ್ಲಿ ಇಲಾಖಾವಾರು ಮಾಡಲಾದ ಶಿಫಾರಸ್ಸುಗಳ ಒಟ್ಟು ಸಂಖ್ಯೆ 5039. ಅವುಗಳಲ್ಲಿ<br><br>1.ಅನುಷ್ಠಾನಗೊಂಡ ಶಿಫಾರಸ್ಸುಗಳು - 1576<br>2.ಅನುಷ್ಠಾನದ ಹಂತದಲ್ಲಿರುವವು – 944<br>3.ಕಾರ್ಯಗತಗೊಳಿಸಲು ಸಾಧ್ಯವಿಲ್ಲದವು – 362<br>4. ಪರಿಶೀಲನೆಯಲ್ಲಿರುವ ಶಿಫಾರಸುಗಳು - 2157 |
| (ಈ) | ಆಯೋಗವು ಮಾಡಿದ ಕೆಲವು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು? | 1.ಕೆಲವು ಶಿಫಾರಸ್ಸುಗಳಿಗೆ ಒಂದಕ್ಕಿಂತ ಹೆಚ್ಚು ಇಲಾಖೆಗಳ ಸಮನ್ವಯದ ಅವಶ್ಯಕತೆ ಇರುತ್ತದೆ.<br>2.ಕೆಲವು ಶಿಫಾರಸ್ಸುಗಳಿಗೆ ಆಯವ್ಯಯದ ಅವಕಾಶ ಕಲ್ಪಿಸಬೇಕಾಗಿರುತ್ತದೆ.<br>3. 362 ಶಿಫಾರಸ್ಸುಗಳನ್ನು ಇಲಾಖೆಗಳು ಒಪ್ಪಿರುವುದಿಲ್ಲ. |
| (ಉ) | ಕರ್ನಾಟಕ ಆಡಳಿತ ಸುಧಾರಣಾ ಆಯೋಗ (1 ಮತ್ತು 2) ಗಳಿಗೆ ಈವರೆವಿಗೂ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು) | ಅನುಬಂಧ ಲಗತ್ತಿಸಿದೆ. |

**ಸಂಖ್ಯೆ:ಸಿಆಸುಇಆಸು/12/ಅಸವ/2025**

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ

# ಅನುಬಂಧ -1

ಕರ್ನಾಟಕ ಆಡಳಿತ ಸುಧಾರಣಾ ಆಯೋಗ (1 ಮತ್ತು 2) ಗಳಿಗೆ ಈವರೆಗೂ ನೀಡಿರುವ ಅನುದಾನದ ವಿವರ;

(ರೂ. ಲಕ್ಷಗಳಲ್ಲಿ)

| ವರ್ಷ | ಒದಗಿಸಿದ ಅನುದಾನ (ಹೆಚ್ಚುವರಿ ಅನುದಾನ ಒಳಗೊಂಡಂತೆ) |
|---|---|
| ಆಡಳಿತ ಸುಧಾರಣಾ ಆಯೋಗ-1 ಕ್ಕೆ ಒದಗಿಸಿದ ಅನುದಾನ | 53.90 |
| ಆಡಳಿತ ಸುಧಾರಣಾ ಆಯೋಗ-2 ಕ್ಕೆ ಒದಗಿಸಿದ ಅನುದಾನದ ವಿವರ: | |
| 2021-22 | 175.97 |
| 2022-23 | 207.18 |
| 2023-24 | 183.74 |
| 2024-25 | 255.39 |
| 2025-26 | 265.20 |